**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 12-03-2024.</u>**

**<u>ಮುಂದುವರೆದ ಪಾಟೀ ಸವಾಲುಃ 1 ರಿಂದ 7 ನೇ ಪ್ರತಿವಾದಿ ಪರ ಶ್ರೀ. ಬಿ ಕೆ ಆರ್ ವಕೀಲರಿಂದಃ</u>**

1. ಪ್ರತಿವಾದಿ ನಂ.1 ರಿಂದ 7 ಮತ್ತು ನಮ್ಮ ತಾಯಿ ಈಗಾಗಲೆ ತಮ್ಮ ತಮ್ಮ ಪಾಲನ್ನು ಪಡೆದು ಸದರಿ ಆಸ್ತಿಗೆ ಸ್ವಾಧೀನವನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಪಾಲಿಗೆ ಆರ ಎಸ್ ನಂ.725 ರಲ್ಲಿ ವಿಸ್ತೀರ್ಣ 8 ಗುಂಟೆ ಜಮೀನನಲ್ಲಿ ಉತ್ತರ ದಿಕ್ಕಿನಲ್ಲಿ ಬಂದಿದೆ. ಸದರಿ 8 ಗುಂಟೆ ಜಮೀನು ಈಗ ಮಾರಾಟವಾಗಿದೆ. ಸದರಿ ಜಮೀನನ್ನು ನಾನು ಮಾರಾಟ ಮಾಡಿದ್ದೇನೆ. ಸದರಿ ಜಮೀನು ನಮ್ಮ ತಂದೆಗೆ ಪಾಲು ಆದ ನಂತರ ಎಫ್.ಡಿ.ಪಿ ಅರ್ಜಿಯಲ್ಲಿ ಕಮಿಷನರವರು ಸಲ್ಲಿಸಿದ ವರದಿಯ ಆಧಾರ ಮೇರೆಗೆ ಬಂದಿತ್ತು ಎಂದರೆ ನಿಜ. ಆರ ಟಿ ಎಸ್ ಎಸ್ ಆರ ನಂ.9/2008-09 ಅರ್ಜಿಯನ್ನು ಯಾರು ಸಲ್ಲಿಸಿದ್ದಾರೆ ನನಗೆ ಗೊತ್ತಿಲ್ಲ. ಎಮ್ ಇ ನಂ.74 ರಂತೆ ಪ್ರತಿವಾದಿ ನಂ.1 ರವರ ಹೆಸರು ಸರ್ವೆ ನಂ.146 ಜಮೀನಿಗೆ ದಾಖಲು ಆಗಿದೆ ಎಂದರೆ ಸರಿಯಲ್ಲ. ಸದರಿ ಎಮ್ ಇ ನಂ.74 ರಂತೆ ಪ್ರತಿವಾದಿ ನಂ.1 ರವರ ಹೆಸರು ಸರ್ವೆ ನಂ.146 ಜಮೀನಿಗೆ ದಾಖಲು ಆಗಿರುವ ಮಾಹಿತಿ ನನಗೆ ಇದ್ದರು ನಾನು ಸುಳ್ಳು ಸಾಕ್ಷಿ ನುಡಿಯುುತ್ತಿದ್ದೇನೆ ಎಂದರೆ ಸರಿಯಲ್ಲ. ಎಮ್ ಇ ನಂ.74 ಪ್ರಶ್ನಿಸಿ ನಮ್ಮ ತಂದೆಯಾಗಲಿ, ನಾನಾಗಲಿ ಅಪೀಲು ಸಲ್ಲಿಸಿಲ್ಲ. ನಮ್ಮ ತಂದೆ ಹಾಗೂ ಪ್ರತಿವಾದಿ ನಂ.1 ರವರ ಗಂಡನ ನಡುವೆ ಈಗಾಗಲೆ ಅವರ ಕುಟುಂಬದ ಆಸ್ತಿಗಳಲ್ಲಿ ಪಾಲು ಆಗಿದ್ದು ಸದರಿ ರವರು ತಮ್ಮ ತಮ್ಮ ಹಿಸ್ಸೆಯ ಆಸ್ತಿಗಳಲ್ಲಿ ಇಲ್ಲಿಯವರೆಗೆ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ರವರು ತಮ್ಮ ತಮ್ಮ ಹಿಸ್ಸೆ

ಆಸ್ತಿಗಳಲ್ಲಿ ಸ್ವಾಧೀನ ಇರುವ ವಿಚಾರ ನನಗೆ ಗೊತ್ತಿದ್ದರು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.11 ರವರು ನನಗೆ ಮತ್ತು ವಾದಿ ನಂ.2 ರವರಿಗೆ ಅನುಕೂಲವಾಗುವಂತೆ ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ನಂ.1 ರಿಂದ 7 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ವಿಷಯವನ್ನು ಬರೆಯಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರುವಿಚಾರಣೆ ಇಲ್ಲ.**</u>

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**